ಶ್ರೀ ಜಿ. ದುಗ್ಗಪ್ಪ.—ಬೆಂಗಳೂರು ಹೊನ್ನಾವರ ರಸ್ತೆಯಲ್ಲಿ ಕಡದಕಟ್ಟೆ ಗ್ರಾಮದ ಬಳಿ ಚಿತ್ರದುರ್ಗ ಜಿಲ್ಲೆಯ ಕೆಲವು ಹರಿಜನರು ಹೋಗಿ ಗುಡಿಸಲು ಹಾಕಿಕೊಂಡು ಕಳೆದ 8–10 ವರ್ಷಗಳಿಂದ ವಾಸ ಮಾಡುತ್ತಿದ್ದರು. ಮತ್ತು ಅವರು ತಾವು ಉಳುಮೆ ಮಾಡುತ್ತಿರುವ ಜಮೀನನ್ನು ತಮಗೆ ಮಂಜೂರು ಮಾಡಬೇಕೆಂದು ರೆವಿನ್ಯೂ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಂಡಿದ್ದಾರೆ, ಅದು ನಿಜವೇ ಮತ್ತು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತಹ ಜಾಗದಲ್ಲಿ ಚಿತ್ರದುರ್ಗ ತಾಲ್ಲೂಕಿನಿಂದ ಬಂದು ಇರುವ ಹರಿಜನರು ಯಾರೂ ಇಲ್ಲ.

Sri ABDUL KHUDDUS ANWAR.—Will the Government conduct an enquiry and recover the amount of Rs. 15,000 which was illegally collected by the Chairman Sri Ramanna and utilise it for the uplift of the panchayat ?

Sri H. V. KOUJALGI.—I have already stated that the Sarpanch has sold this property in public auction and he must have taken the amount to the panchayat funds. It all depends upon the result of the suit.

Non-Utilisation of the New Hostel Building constructed for A.Ks. in Hassan

207. Sri H. B. JWALANAIAH (Hassan).—

Will the Minister for Social Welfare be pleased to state :—

(*a*) when the construction of the new aided Hostel Building for Adi-Karnatakas at Hassan was taken up ;

(*b*) the amount spent for its construction up to this time ;

(*c*) whether it has come to the notice of the Government that though the building was completed long back is still unoccupied ?

Sri V. L. PATIL (Minister for Social Welfare).—

(*a*) No building was taken up and constructed for the Aided Hostel at Hassan.

(*b*) Does not arise in view of reply to (*a*) above.

(*c*) Does not arise in view of reply to (*a*) above.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಾಸನದಲ್ಲಿ ಸುಮಾರು ಎಂಟು ವರ್ಷಗಳ ಹಿಂದೆ ಶ್ರೀ ಎನ್. ರಾಚಯ್ಯನವರು ಮಂತ್ರಿಗಳಾಗಿದ್ದಾಗ ಎರಡು ಲಕ್ಷ ಖರ್ಚು ಮಾಡಿ ಒಂದು ಹರಿಜನರ ಹಾಸ್ಟರ್ ಕಟ್ಟಿಸಿರಲಿಲ್ಲವೇ ! ಇಲ್ಲಿಯವರೆಗೂ ಈ ಕಟ್ಟಡ ಉಪಯೋಗವಿಲ್ಲದೆ ಕತ್ತೆ, ನಾಯಿಗಳು ವಾಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಈಚೆಗೆ ಸರಕಾರದವರು ಆಹಾರದವಸ ತುಂಬಲು ಉಪಯೋಗಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ವಿ. ಎನ್. ಪಾಟೀಲ್.—ಹಾನನದಲ್ಲಿ ಏಡೆಡ್ ಹಾಸ್ಟಲ್‌ಗಾಗಿ ಯಾವ ಕಟ್ಟಡವನ್ನೂ ಕಟ್ಟಿಲ್ಲ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಸರಕಾರ ಎರಡು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಯಾವ ಹಾಸ್ಟಲನ್ನೂ ಕಟ್ಟಿಸಿಲ್ಲವೇ ?

ಶ್ರೀ ವಿ. ಎನ್. ಪಾಟೀಲ್.—ತಾವು ಇಲ್ಲಿ ಏಡೆಡ್ ಹಾಸ್ಟಲ್ ಬಗ್ಗೆ ಕೇಳಿದ್ದೀರಿ. ಬೇರೆ ಪ್ರಶ್ನೆ ಕೇಳಿದರೆ ಆಗ ಇದರ ಬಗ್ಗೆ ಉತ್ತರ ಕೊಡಬಹುದು.

ಶ್ರೀ ಜಿ. ದುಗ್ಗಪ್ಪ.—ತಾವು ಏಡೆಡ್ ಹಾಸ್ಟಲ್ ಎಂದು ನೆಪ ಮಾಡಿಕೊಂಡು ಇಲ್ಲ ಉತ್ತರ ಕೊಟ್ಟರೆ ಹೇಗೆ ? ಸರಕಾರದವರು ಇಲ್ಲಿ ಹರಿಜನರಿಗೇ ಹಾಸ್ಟಲ್‌ನ್ನು ಕಟ್ಟಿಸಿದ್ದಾರೆ. ಈಗಲಾದರೂ ನಿಮ್ಮ ಡಿಪಾರ್ಟ್‌ಮೆಂಟು ಅಧಿಕಾರಿಗಳನ್ನು ಕೇಳಿ ಆ ನಂತರ ಇಂತಹ ಹಾಸ್ಟಲ್ ಇದೆಯೇ ಇಲ್ಲವೇ ಎನ್ನುವುದರ ಬಗ್ಗೆ ಉತ್ತರ ಕೊಡುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಪ್ರತ್ಯೇಕವಾದ ಇನ್ನೊಂದು ಪ್ರಶ್ನೆ ಹಾಸ್ಟಲುಗಳ ಬಗ್ಗೆ ಹಾಕಿದರೆ ಆಗ ಎಲ್ಲ ವಿವರಗಳನ್ನೂ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರುಂಗನಾಥ್.—ಒಂದು ಸಾರಿ ನಾನು ತಮ್ಮ ಕಡೆಗೆ ಇಂತಹ ಹಾಸ್ಟಲ್ ಬಗ್ಗೆ ಹೇಳಿದಾಗ ತಾವು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಿರಿ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ಬಂದಿದ್ದಾಗ ನಾನು ಹೇಳಿದೆ ಇಂತಹ ಯಾವ ಇನ್‌ಸ್ಟಿಟ್ಯೂಷನ್‌ಗಳೂ ಇಲ್ಲ ಎಂದು ಮತ್ತು ಇದರ ಸಂಬಂಧ ಪತ್ರವ್ಯವಹಾರಗಳನ್ನು ತಂದು ಕೊಟ್ಟರೆ ಆಗ ಪರಿಶೀಲನೆ ಮಾಡಬಹುದು ಎಂದು ಹೇಳಿದೆ. ಇದುವರೆಗೂ ನನ್ನ ಕಡೆಗೆ ವಿವರಗಳು ಬರಲಿಲ್ಲ. ನಮ್ಮಲ್ಲಿ ಯಾವ ರಿಕಾರ್ಡುಗಳೂ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಾನನದಲ್ಲಿ ಡಿಪ್ರಸ್ಡ್ ಕ್ಲಾಸ್ ಅಮಿಲಿಯೋರೇಷನ್ ಫಂಡಿನಿಂದ ಒಂದು ಹರಿಜನರ ಹಾಸ್ಟಲ್ ಕಟ್ಟಿಸಿರುವುದು ನಿಜವೇ ? ಹಾಗಿದ್ದರೂ ಇದು ಇನ್ನೂ ಉಪಯೋಗ ಮಾಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ಎನ್. ಪಾಟೀಲ್.—ಇದು ಬೇರೆ ಪ್ರಶ್ನೆ. ತಾವು ಬೇರೆ ಪ್ರಶ್ನೆ ಹಾಕಿದರೆ ಆಗ ವಿವರಗಳನ್ನು ಕೊಡಬಹುದು.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಸರಕಾರದಲ್ಲಿ ಸೋಷಿಯಲ್ ವೆಲ್‌ಫೇರ್ ಇರಾಖೆ ಇದೆ. ಇದರ ಮೂಲಕ ಹಣ ಕೊಟ್ಟು ಹರಿಜನರಿಗಾಗಿ ಹಾಸ್ಟಲ್ ಕಟ್ಟಿಸಿರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ವಿ. ಎನ್. ಪಾಟೀಲ್.—ಬೇರೆ ಪ್ರಶ್ನೆ ಕೇಳಿದರೆ ಆಗ ಹೇಳಬಹುದು.

Major and Medium Irrigation Projects taken up during II and III Plan Periods

259. Sri N. HUTCHMASTY GOWDA (Huliyurdurga).—

Will the Chief Minister be pleased to state :—

(*a*) the Major and Medium Irrigation Projects taken up for execution during the Second and Third Five Year Plan periods in the State ;

) the amount spent during these two plan periods on each of these projects (yearwise expenditure may be furnished) ;